# ಬೀಜ

■ ಮಾಸ ಬೆಳಲಗೆರೆ

ನೋಡಲು ನೀನು ಸಣ್ಣ ಬೀಜ
ಮೊಳೆಯುವೆ ಮಣ್ಣಲಿ ಬಹು ಸಹಜ!
ಕವಚವ ತೆರೆದು ಎಲೆಗಳ ಬಿರಿದು
ಭೂಮಿಯ ಒಡಲಿಗೆ ಬೇರನು ಇರಿದು
ನಿಂತಿಯೆ ಸೂರ್ಯಗೆ ಮುಖ ಮಾಡಿ!

ಸ್ವಲ್ಪ ನೀರು, ಸ್ವಲ್ಪ ಗಾಳಿ
ಸ್ವಲ್ಪ ರಕ್ಷಣೆ ನಿನ್ನಯ ಸುತ್ತಲು
ದಿನದಿಂದ ದಿನಕೆ
ಬೆಳೆಯುವೆ ಬೆಳೆಯುವೆ
ಬೆಳೆಯುವೆ ನನ್ನಯ ಎತ್ತರಕೆ!

ಹೂವನು ಬಿಡುವೆ
ಕಾಯಿಯ ಕೊಡುವೆ
ಹಣ್ಣಿನ ರುಚಿಯನು ನೀ ಕೊಡುವೆ
ಸುತ್ತಲು ನೆರಳಿನ ತಂಪೆರೆವೆ!







# ಮೋಡ ತೇಲಿ ಬರಲಿ

■ ರಾಜಶೇಖರ ಕುಕ್ಕುಂದಾ

ಗೂಡು ಕಟ್ಟಿ
ಸಾಲು ಸಾಲು
ಮೋಡ ತೇಲಿ ಬರಲಿ

ಗುಡುಗು–ಮಿಂಚು
ಗಾಳಿಯೊಡನೆ
ಮಳೆಯ ಹೊತ್ತು ತರಲಿ

ಮೋಡದಿಂದ
ರವಿಯು ತಾನು
ಹೊರಗೆ ಇಣುಕಿ ನಗಲಿ

ಬಸವನ ಹುಳು
ಆಟಕಾಗಿ
ನನ್ನ ಕೈಗೆ ಸಿಗಲಿ!

ತಟ ಪಟ ತಟ
ತಟ ಪಟ ತಟ
ಮಳೆ ಸುರಿಯುತ್ತಿರಲಿ

ವಟರ್ ವಟರ್
ಎಂದು ಕಪ್ಪೆ
ವಟಗುಟ್ಟುತ್ತಿರಲಿ!

ಹಳ್ಳಕೊಳ್ಳ
ಬಾವಿಕೆರೆ
ಎಲ್ಲ ತುಂಬಿಬಿಡಲಿ

ಮಳೆಯ ನೆಪವ
ಮಾಡಿಕೊಂಡು
ಶಾಲೆ ಸೂಟಿ ಕೊಡಲಿ! ■